ಓ ಎಸ್ ನಂಃ 24/2025
ಡಿ . ಡಬ್ಲ್ಯೂ-1

**(ಇಂದು ದಿನಾಂಕ 27-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ವಾದಿ ಪರ ಶ್ರೀ.ಎಮ್. ಪಿ. ಇ ವಕೀಲರಿಂದ**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರತಿಜ್ಞಾ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೆನೆ. ನನ್ನ ಅಜ್ಜನ ಹೆಸರು ಬಸಪ್ಪ ಎಂದರೆ ಸರಿ. ನನ್ನ ತಂದೆಯ ಹೆಸರು ಮಲ್ಲಪ್ಪ ಎಂದರೆ ಸರಿ. ನನ್ನ ತಂದೆಗೆ ಒಟ್ಟು ನಾಲ್ಕು ಜನ ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ನಮಗೆ ನಮ್ಮ ತಂದೆಯಿಂದ ಬಂದಿದೆ ಎಂದರೆ ಸರಿ. ದಿನಾಂಕಃ 06-09-2013 ರಂದು ನಾನು ಮತ್ತು ಸಹೋದರರು ನೋಂದಣಿ ಪತ್ರದನ್ವಯ ವಾಟ್ನಿ ಮಾಡಿಕೊಂಡಿದ್ದೆವೆ ಎಂದರೆ ಸರಿ. ಸದರಿ ವಾಟ್ನಿ ಪತ್ರದನ್ವಯ ನಾವುಗಳು ನಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಕಬ್ಜಾ ವಹಿವಾಟು ಹೊಂದಿದ್ದೆವೆ ಎಂದರೆ ಸರಿ.

ವಾದಿ ನನ್ನ ಮಗ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗೆ ಕಾನೂನು ಬದ್ಧ ಹಿಸ್ಸೆ ಇದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯನ್ನು ಮೊದಲು ನಿಗದಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. 3 ನೇ ಪ್ರತಿವಾದಿ ಕಲಘಟಗಿ ತಾಲೂಕಿನ ದಾಸ್ತಿಕೊಪ್ಪದ ಕಲ್ಲನಗೌಡ ಜಂಗಳೆಪ್ಪಗೌಡರ ಇವರನ್ನು 2 ನೇ ಮದುವೆ ಆದರು ಎಂದರೆ ಸರಿ. ಸದರಿಯವರ ದಾಂಪತ್ಯದಿಂದ ಎರಡು

ಮಕ್ಕಳು ಅಂದರೆ ಕಸ್ತೂರಿ ಮತ್ತು ಶೇಖವ್ವಾ ಜನಿಸಿದರು ಎಂದರೆ ಸರಿ. ಕಲ್ಲನಗೌಡ ಜಂಗಳೆಪ್ಪಗೌಡರ ಮರಣ ಹೊಂದಿದ ನಂತರ 3 ನೇ ಪ್ರತಿವಾದಿ ಪುನಃ ನಮ್ಮ ಊರಿಗೆ ಬಂದರು ಎಂದರೆ ಸರಿ. ದಾವಾ ಸ್ವತ್ತುಗಳನ್ನು ಪರಭಾರೆ ಮಾಡಲು ನನಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ದಿನಾಂಕಃ 05-01-2024 ರಂದು ದಾವಾ ಅನುಸೂಚಿಯ ಜಮೀನು ಸರ್ವೆ ನಂ.373/10 (ಹಳೆಯ ಸರ್ವೆ ನಂ.373/3) ಕ್ಷೇತ್ರ 13 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿದ್ದೆನೆ ಎಂದರೆ ಸರಿ. ಸದರಿ ದಾನಪತ್ರಕ್ಕೆ ವಾದಿ ಮತ್ತು 2 ನೇ ಪ್ರತಿವಾದಿ ತಕರಾರು ಮಾಡಿದರು ಎಂದರೆ ಸರಿ. ವಾದಿಯು ದಾವಾಸ್ವತ್ತುಗಳಲ್ಲಿ ತನ್ನ ಕಾನೂನು ಬದ್ಧ ಹಿಸ್ಸೆಯನ್ನು ಕೊಡುವಂತೆ ನನ್ನನ್ನು ಕೇಳಿದ ಎಂದರೆ ಸರಿ. ವಾದಿಯು ತಾನು ಕಾನೂನ ಬದ್ಧ ಅರ್ಧ ಹಿಸ್ಸೆಯನ್ನು ಹೊಂದಲು ಅರ್ಹನಿದ್ದಾನೆ ಎಂದರೆ ಸರಿಯಲ್ಲ. ವಾದಿಯು ತಾನು ಕಾನೂನ ಬದ್ಧ ಹಿಸ್ಸೆ ಹೊಂದಲು ಅರ್ಹನಿದ್ದರು ಸಹ ಅವನಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.